ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Tuesday, the 6th May 1980, / Vaishaka 16, 1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

ಶ್ರೀ ಹಾರ್ನಳ್ಳಿ ರಾಮಸ್ವಾಮಿ.— ಮಾನ್ಯ ಅಧ್ಯಕ್ಷರೆ. ಈ ದಿನ ಪ್ರಶ್ನೋತ್ತರ ವೇಳೆ ಇಲ್ಲವೆಂದು ಕಾಣುತ್ತದೆ. ಏಕೆಂದರೆ ಸಭೆ ಕಳಿತ ತಕ್ಷಣ ಬಿಲ್ ತೆಗೆದುಕೊಳ್ಳ ವಹಾಗೆ ಕಾಣುತ್ತಿದೆ. ನಾನು ನಿನ್ನೆ ಒಂದು ಸೂಚನೆಯನ್ನು ಕೊಟ್ಟಿದ್ದೆ. ಸಭೆಯ ಹಕ್ಕು ಭಾದ್ಯತೆಗಳಿಗೆ ಸಂಬಂಧಪಟ್ಟ...

ಅಧ್ಯಕ್ಷರು.— ಈ ದಿನ ಈ ಬಿಲ್ ಮುಗಿದ ಮೇಲೆ ಮಧ್ಯಾಹ್ನ ಪ್ರಶ್ನೋತ್ತರಗಳನ್ನು ತೆಗೆದು ಕೊಳ್ಳಬೇಕೆಂದು ತೀರ್ಮಾನವಾಗಿದೆ. ಆದ ರಿಂದ ಈ ಬಿಲ್ ಮೇಲಿನ ಚರ್ಚೆಯನ್ನು ಈಗ ಮುಂದು ಫರಿಸಬಹುದು.

LEGISLATIVE BUSINESS

KARNATAKA ESSENTIAL SERVICES MAINTENANCE BILL, 1979.

(Discussion continued)

† ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ್).— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಈ ಮುಸೂದೆಯನ್ನು ತರುವುದಕ್ಕೆ ಯಾವುದೇ ತರಹದ ಕಾರಣವೂ ಇಲ್ಲ ಎನ್ನುವುದನ್ನು ನಾನು ನಿನ್ನೆ ಪ್ರಸ್ತಾಪ ಮಾಡಿದ್ದೇನೆ. ಇದನ್ನು ತರಬೇಕೆನ್ನುವ ವಿಶೇಷ ಕಾರಣ ಅವರಿಗೆ ಕಂಡು ಬಂದಿರುವಾಗ. ಆಡಳಿತವನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಆಗುವುದಿಲ್ಲವೆಂದು ಅವರೇ ಒಪ್ಪಿಕೊಂಡ ಹಾಗೆ ಆಗುತ್ತದೆ. ನಮ್ಮ ರಾಜ್ಯದಲ್ಲಿ ಇಂತಹ ಕಾನೂನುಗಳು ಸರ್ಕಾರದಲ್ಲಿ ಇಲ್ಲದೇ ಹೋದರೆ ಸಾರ್ವಜನಿಕ ಜೀವನ ಸುಸೂತ್ರವಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲವೆಂದರೆ, ಎಷ್ಟರಮಟ್ಟಿಗೆ ಈ ರಾಜ್ಯದ ಒಂದು ಆಡಳಿತ ಕೆಟ್ಟುಹೋಗಿದೆ ಎಂದು ಅವರೇ ಒಪ್ಪಿಕೊಂಡಹಾಗಾಗುತ್ತದೆ. ಇದನ್ನು ಸರ್ಕಾರ ಒಪ್ಪುತ್ತದೆಂದು ನನ್ನ ಭಾವನೆ. ಕೆಲವು ಮುಷ್ಕರಗಳು ನಡೆಯುತ್ತವೆ ನಿಜ. ಆ ಮುಷ್ಕರಕ್ಕೆ ಕಾರಣಗಳನ್ನು ಅಧಿಕಾರಿಗಳೂ ಹಾಗೂ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡಿದರೆ ಸಕಾಲದಲ್ಲಿ ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ. ಹಲವು ವಿವಾದಗಳು ತೀರ್ಮಾನವಾಗಿವೆ, ತೀರ್ಮಾನ ಆಗದೇ ಉಳಿದಿರುವುವೂ ಬಹಳ ಇವೆ. ಕಾರ್ಮಿಕರೂ ಕೂಡ ತಮ್ಮ ವಿವಾದಗಳು ಏನಿವೆ ಅವುಗಳನ್ನು ಕಾನೂನಿನ ಮೂಲಕ ಸರ್ಕಾರಕ್ಕೆ ತಿಳಿಸಿ, ಸರ್ಕಾರ ಮಾಲೀಕರ ಜೊತೆ ಮಾತುಕತೆ ನಡೆಸಿ, ಪರಿಹಾರ ಮಾಡುವುದಕ್ಕೆ ಮಾರ್ಗವನ್ನು ಕಂಡುಹಿಡಿಯಬೇಕಾಗುತ್ತದೆ. ಮುಷ್ಕರ ಹೂಡಿದ ಮೇಲೆ ಅವರು ಶಾಂತಿಯುತವಾಗಿರುತ್ತಾರೆ. ಸಂಯುಕ್ತ ಕರ್ನಾಟಕದವರೇ ಇದಕ್ಕೆ ಉದಾಹರಣೆ. ಎಷ್ಟು ದಿವಸಗಳಾದರೂ ಅವರು ಸಹಾನುಭೂತಿಯಿಂದ ಕಳಿತುಕೊಂಡಿದ್ದಾರೆಯೇ ಹೊರತು ಅವರು ಯಾವ ಕೃತ್ಯವನ್ನೂ ಸಹನೆ ಕಳೆದುಕೊಂಡು ಮಾಡಿಲ್ಲ. ಸರ್ಕಾರವನ್ನು ಅವರು ಕೇಳುತ್ತಿದ್ದಾರೆ ಆದರೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇಂತಹ ಒಂದು ಮುಸೂದೆಯನ್ನು ತರುವುದಕ್ಕೆ ನಮ್ಮ ರಾಜ್ಯದಲ್ಲಿ ಯಾವುದೇ ಒಂದು ಕಾರಣವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ.